**<u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು</u>**

**<u>ಸಿ.ಸಿಃ 1130/2018</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಮಹೇಶ | ಪ್ರಾ ಸಾಃ 2 |
| ತಂದೆಯ/ಗಂಡನ ಹೆಸರು | | ಲೇಟ್ ಗೋಪಾಲಯ್ಯ | ಚಾಸಾಃ 2 |
| ವಯಸ್ಸು | | 40 | |
| ಕೆಲಸ | | ಕೂಲಿ | ಸಾ ಪ್ರ ಬೋ |
| ವಾಸ | | ಅಂಚಿಪುರ | ದಿಃ 27.12.2022 |

**<u>ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ</u>**

ಆರೋಪಿತರು ನಮ್ಮ ಗ್ರಾಮದವರು. ಚಾಸಾ-1 ನಮ್ಮ ಗ್ರಾಮದವರು. ಚಾಸಾ-3 ರಿಂದ 6 ನಮ್ಮ ಗ್ರಾಮದವರು.

2. ದಿನಾಂಕ 28.03.2018 ರಂದು ನಾನು ಚಾಸಾ-1 ರವರ ಕೊಟ್ಟಿಗೆಯ ಕೆಲಸಕ್ಕೆ ಹೋಗಿದ್ದೆನು. ಆಗ 1 ನೇ ಆರೋಪಿತನು ಬಂದು ಜಾಗದ ವಿಚಾರದಲ್ಲಿ ಚಾಸಾ-1 ರವರಿಗೆ ಬೋಳಿಮಗನೇ ಸೂಳೆಮಗನೇ ಎಂದು ಬೈದಿರುತ್ತಾನೆ. 2 ನೇ ಆರೋಪಿತನು ಚಾಸಾ-1 ರವರ ಎಡಗಾಲಿಗೆ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯಿಂದ ಹೊಡೆದಿರುತ್ತಾನೆ. 1 ನೇ ಆರೋಪಿ ನ್ಯಾಯಾಲಯದ ಮುಂದಿರುವ ಕಲ್ಲಿನಿಂದ ಚಾಸಾ-1 ರವರ ಹಣೆಗೆ ಹೊಡೆದಿರುತ್ತಾನೆ. 1 ಮತ್ತು 2 ನೇ ಆರೋಪಿತರು ಸೇರಿಕೊಂಡು ಕೈಗಳಿಂದ ಚಾಸಾ-1 ರವರ ಭುಜಕ್ಕೆ ಮತ್ತು ಎದೆಗೆ ಹೊಡೆದಿರುತ್ತಾರೆ. ಆಗ ನಾನು ಮತ್ತು ಚಾಸಾ-5 ರವರು ಗಲಾಟೆಯನ್ನು ಬಿಡಿಸಿರುತ್ತೇವೆ. ಚಾಸಾ-1 ರವರನ್ನು ಚಾಸಾ-6 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮಾ.ಮಾ-1 ಮತ್ತು 2 ರ ದೊಣ್ಣೆ ಮತ್ತು ಕಲ್ಲನ್ನು ನೋಡಿ ಗುರುತಿಸಿರುತ್ತಾರೆ.

3. ಮರುದಿನ ಪೊಲೀಸರು ಗಲಾಟೆ ನಡೆದ ಜಾಗಕ್ಕೆ ಬಂದಿದ್ದು ನಾನು ಸ್ಥಳ ತೋರಿಸಿದ ಮೇರೆಗೆ ಮದ್ಯಾಹ್ನ 11.30 ರಿಂದ 12.30 ರವರೆಗೆ ಮಹಜರ್ ಅನ್ನು ಜರುಗಿಸಿರುತ್ತಾರೆ. ಸದರಿ ಕಾಲಕ್ಕೆ

ನನ್ನೊಂದಿಗೆ ಚಾಸಾ-3 ಮತ್ತು 4 ರವರು ಇದ್ದರು. ಪೊಲೀಸರು ಸ್ಥಳದಲ್ಲಿ ಮಹಜರ್ ಅನ್ನು ಜರುಗಿಸಿದ್ದು ನಾನು ಹಾಜರುಪಡಿಸಿದ ಮೇರೆಗೆ ಮಾ.ಮಾ-1 ಮತ್ತು 2 ಅನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಕಾಲಕ್ಕೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

( ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು )

**ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದಃ**

1 ನೇ ಆರೋಪಿ ಚಾಸಾ-1 ರವರ ಎದೆಗೆ ಕೈಯಿಂದ ಗುದ್ದಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಚಾಸಾ-1 ರವರ ಎರಡೂ ಭುಜಗಳಿಗೆ ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿ. ದನದ ಕೊಟ್ಟಿಗೆಯ ವಿಚಾರವಾಗಿ ಗಲಾಟೆ ನಡೆದಿರುತ್ತದೆ ಎಂದರೆ ಸರಿ.

**ಪಾಟೀ ಸವಾಲು ಶ್ರೀ ಸಿ.ಎಲ್.ವಿ. ವಕೀಲರಿಂದ ಆರೋಪಿ ಪರವಾಗಿಃ**

ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮೂಂದೂಡಿದೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**